NP – 024

**IV Semester B.C.A. Examination, August/September 2023**
**(NEP)**
**ಕನ್ನಡ ಪತ್ರಿಕೆ – 4**
**ಗಣಕ ಕನ್ನಡ – 4**

Time : 2½ Hours                                                                 Max. Marks : 60

I. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**200** ಪದಗಳಿಗೆ ಮೀರದಂತೆ). **(2×10=20)**

1) 'ನಾಗಣ್ಣನ ಕನ್ನಡಕ' ಕವಿತೆಯ ಸ್ವಾರಸ್ಯವನ್ನು ವಿವರಿಸಿ.
2) ಆಧುನಿಕ ಜಗತ್ತಿನ ಬದುಕಿನ ಪಲ್ಲಟಗಳನ್ನು 'ಮಣ್ಣಿನ ಮುಚ್ಚಳ' ಕತೆ ಪ್ರಸ್ತುತಪಡಿಸಿರುವ ಬಗೆ ಹೇಗೆ ? ವಿವರಿಸಿ.
3) ನಮ್ಮ ಮಾತನ್ನು ಅಕ್ಷರವಾಗಿ ಪರಿವರ್ತಿಸುವ ತಂತ್ರಾಂಶಗಳನ್ನು ಪರಿಚಯಿಸಿ.

II. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**100** ಪದಗಳಿಗೆ ಮೀರದಂತೆ). **(4×5=20)**

1) ಕವಿನಪ್ಪನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.
2) ಕವಿತೆಯ ಆರಂಭದಲ್ಲಿ ರಾತ್ರಿಯನ್ನು ಹೇಗೆ ವರ್ಣಿಸಲಾಗಿದೆ ?
3) ಲಿಜ್ಜತ್ ಪಾಪಡ್ ಬೆಳೆದು ಬಂದ ದಾರಿಯನ್ನು ನಿರೂಪಿಸಿ.
4) ರಾಯರು ಸಂತೆಗೆ ಹೋದಾಗ ಆದ ಅನುಭವಗಳನ್ನು ಕುರಿತು ಬರೆಯಿರಿ.
5) ಆರಂಭಿಕ ವಿಜ್ಞಾನ ಸಾಹಿತ್ಯದ ಅನುವಾದಗಳ ಬಗ್ಗೆ ಬರೆಯಿರಿ.

III. ಕೆಳಕಂಡ ಕಂಡಿಕೆಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ. **(1×4=4)**

ಕವಿನಪ್ಪ ನನಗೆ ಪರಿಚಿತನಿದ್ದ ವ್ಯಕ್ತಿಯೇ ಆಗಿದ್ದ. ಮುಖ್ಯ ರಸ್ತೆಯ ಪಕ್ಕದಲ್ಲಿ ಅವನ ಮನೆಯಿತ್ತು . ಮನೆ ಹಿಂದೆ ತೋಟ , ಪ್ರತಿದಿನ ಬೆಳಿಗ್ಗೆ ಸಂಜೆ ಅವನ ಮನೆ ಮುಂದೆ ನಾನು ಬೈಕಿನಲ್ಲಿ ಅಡ್ಡಾಡುತ್ತಿದ್ದೆ. ಕವಿನಪ್ಪ ಯಾವತ್ತೂ ಅವನಾಗಿ ಮಾತನಾಡಿಸಿದವನಲ್ಲ. ವಿಪರೀತ ಸಂಕೋಚದ ವ್ಯಕ್ತಿ . ಅದೂ ಅಲ್ಲದೆ ಯಾವಾಗಲೂ ಕುಡಿದಿರುತ್ತಿದ್ದ. ಮೊದಲಿಗೆ ಶ್ರೀಮಂತನಾಗಿದ್ದವ. ದಿನ ಕಳೆದಂತೆ ನಾನಾ ಕಾರಣಗಳಿಂದ ಅವನ ಸಿರಿತನ ಸವೆದುಹೋಗಿತ್ತು .

IV. ಪುಷ್ಪಾ ಎಂಬ ಕಾಲ್ಪನಿಕ ಹೆಸರಿನಲ್ಲಿ ಕಂಪನಿಯೊಂದರ ಲೆಕ್ಕಪರಿಶೋಧಕ ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ (**90** ಪದಗಳಿಗೆ ಮೀರದಂತೆ). **(1×4=4)**

ಅತಿವೃಷ್ಟಿಯಿಂದಾಗಿ ಬೆಳೆ ನಾಶವಾಗಿರುವುದನ್ನು ನೋಡುತ್ತಿರುವ ರೈತ.

P.T.O.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ, ಸೂಕ್ತ ಶೀರ್ಷಿಕೆ ನೀಡಿ. **(1×4=4)**

ರಾಯರು ಆ ಮುರಿದ ಚಾಳೀಸನ್ನು ಒಮ್ಮೆ ಮೂಗಿನ ಮೇಲೆ ಏರಿಸಿಕೊಂಡು ನೋಡಿದರು. ಏನಾಶ್ಚರ್ಯ ! ಭಗ್ನ ಇಡೀ ಬ್ರಹ್ಮಾಂಡದಲ್ಲಿ ಕೋಟಿ ಸೂರ್ಯರು ಬೆಳಗಿದ ಅನುಭವ ರಾಯರಿಗಾಯಿತು. ತಮ್ಮ ಹಳೆಯ ಯಾವ ಚಾಳೀಸಿನಲ್ಲೂ ಎಂದೂ ಇಷ್ಟೊಂದು ನಿಚ್ಚಳವಾಗಿ ಕಾಣಿಸಿರಲಿಲ್ಲ. ಕಣ್ಣೆದುರಿಗೆ ಚಾಳೀಸು ಹಿಡಿದು ಒಮ್ಮೆ ಜೋಗೇರವನ ಮುಖ ನೋಡಿದರು. ಮುಖವಷ್ಟೇ ಅಲ್ಲ, ಆ ಜೋಗೇರವನ ಅಂತರಂಗವೇ ಒಡಮೂಡಿ ಕಣ್ಣೆದುರಿಗೆ ಕಟ್ಟಿದಂತಾಯ್ತು. ರಾಯರಿಗೆ ಖುಷಿಯೋ ಖುಷಿ. ಚೌಕಾಸಿಯ ಸ್ವಭಾವದ ರಾಯರು ಮರು ಮಾತಾಡದೇ ಜೋಗೇರವನು ಹೇಳಿದ ಬೆಲೆ ಕೊಟ್ಟು ಚಾಳೀಸನ್ನು ಜೇಬಿಗೆ ಹಾಕಿಕೊಂಡು ಹೊರಟರು.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ. **(4×1=4)**

**(ಎಲ್ಲಾ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ)**

1) ಲೇಖಕರ ವೃತ್ತಿ ಯಾವುದು ?
   - ಎ) ವೈದ್ಯ
   - ಬಿ) ಪಶುವೈದ್ಯ
   - ಸಿ) ದಂತ ವೈದ್ಯ
   - ಡಿ) ಪಶುಪಾಲಕ

2) ಮಿಂಚು–ಗುಡುಗುಗಳ ನಡುವೆ ಮರೆಯಾಗಿ ಹೋದವರು ಯಾರು ?
   - ಎ) ಬೋದಿಲೇರ್
   - ಬಿ) ಲಂಕೇಶ್
   - ಸಿ) ಡಿ. ಆರ್. ಎನ್.
   - ಡಿ) ಡಾಂಟೆ

3) ರಾಯರಿಗೆ ಮುರಿದ ಚಾಳೀಸನ್ನು ಮಾರಿದವರು ಯಾರು ?
   - ಎ) ಎಲ್ಲವ್ವ
   - ಬಿ) ರಂಗನಾಥ
   - ಸಿ) ಹರಿಣಾಬಾಯಿ
   - ಡಿ) ಜೋಗೇರವ

4) 'ಅಕೇಷಿಯಾ ಅರೇಬಿಕ' ಮರ ಯಾವುದು ?
   - ಎ) ಕರಿಜಾಲಿ ಮರ
   - ಬಿ) ನೀಲಗಿರಿ ಮರ
   - ಸಿ) ಮಾವಿನ ಮರ
   - ಡಿ) ಬಿದಿರು

---